# ಅಧ್ಯಾಯ 8

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ :-ಹಲವು ಶಾಸ್ತ್ರದೊಳೊದಿ ಪಾಂಡಿತ್ಯವನು  ಗಳಿಸಿದೊಡಾಗದು
ಸಲೆ ಸ್ವರೂಪವನಾವಗಂ ಲಕ್ಷಿಸುತ ಬ್ರಹ್ಮನ ವೊಲಿವುದು ಸುಲಭದಿಂ
ಸರ್ವದೊಳು ಯೇಕಾತ್ಮತೆಯ ಯಾವನು ಕಾನ್ಬನು ಒಲಿಯುತ್ತಾ
ಸಿದ್ದರೂಢಾರ್ಯಗೆ ಬಹು ವಿನಯದಿಂ ನಮಿಪೆನು..

ಶ್ರೀ ಸಿದ್ಧಾರೂಢ ಭಗವಂತನು ಭಕ್ತರಿಗೆ ಬಹು ಕೃಪಾವಂತನಾಗಿರುವನು, ಮತ್ತು ಅಭಕ್ತರ ಅಜ್ಞಾನ ವೃತ್ತಿಯನ್ನು ಕ್ಷಣಾರ್ಧದಲ್ಲಿ ಬಿಡಿಸುವನು. ಅಂಥವರನ್ನು ಭಕ್ತಿ ಪಂಥಕ್ಕೆ ಹಚ್ಚಿ, ಎಲ್ಲಾ ಭೇದ ವಾರ್ತೆಯನ್ನು ಪರಿಹರಿಸಿ, ಅಭೇದದೊಳಗೆ ಮತಿ ನಿಲ್ಲುವಂತೆ ಮಾಡುವನು. ಹಿಂದಿನ ಅಧ್ಯಾಯದೊಳಗೆ ಹೇಳಿತ್ತಲ್ಲ. ಬ್ರಾಹ್ಮಣನನ್ನು ಪಂಚಾಕ್ಷರಿ ಉಪದೇಶದಿಂದ ನಿರೋಗಿಯನ್ನಾಗಿ ಮಾಡುವನು. ಅಲ್ಲಿಂದ ಸಿದ್ಧರು ಕೇದಾರಘಟ್ಟಕ್ಕೆ ಹೋಗಿ ಕೇದಾರೇಶ್ವರ ಲಿಂಗವನ್ನು ಕಂಡು, ಅನಂತರ ಜಂಗಮವಾಡಿಗೆ ಬಂದರು. ಆಮೇಲೆ ಮಣಿಕರ್ಣಿಕಾ ದೇವಾಲಯವನ್ನು ಕಂಡು ಅನ್ನಪೂರ್ಣ ದೇವಸ್ಥಾನದಲ್ಲಿ ದೇವಿಯ ದರ್ಶನ ತಕ್ಕೊಂಡು, ಮುಂದೆ ಸುರಾಭಾಂಡಲಿಂಗ ಗೃಹಕ್ಕೆ ಹೋಗಿ ಅಲ್ಲಿ ದರ್ಶನ ತಕ್ಕೊಂಡರು. ಅನಂತರ ಬ್ರಹ್ಮಘಾಟದಿಂದ ನದಿಗೆ ಇಳಿದು, ಗಂಗಾಜಲದಲ್ಲಿ ಆಚಮನ ಮಾಡಿ, ದಶಾಶ್ವಮೇಧಘಟ್ಟಕ್ಕೆ ಬಂದು ದೇವಾಲಯದಲ್ಲಿ ಕೂತುಕೊಂಡರು. ಅಲ್ಲಿ ಮನಸ್ಸಿನಲ್ಲಿ ಅಂದುಕೊಳ್ಳುತ್ತಾರಲ್ಲ - 'ಪ್ರಜಾಪತಿಯು ಈ ಸ್ಥಾನದಲ್ಲಿ ಹತ್ತು

ಅಶ್ವಮೇಧಗಳನ್ನು ಮಾಡಿದ್ದನು, ಎಂದು ಈ ಘಟ್ಟಕ್ಕೆ ಹೀಗೆ ಹೆಸರು ಬಂದಿರುತ್ತದೆ. ಸರ್ವ ಪ್ರಜೋತ್ಪತ್ತಿಗೆ ನಾನೇ ಅಧಿಷ್ಠಾನನಿರುವದರಿಂದ, ಪ್ರಜಾಪತಿಗೆ ನಾನು ಭಿನ್ನನಲ್ಲ" ಅನ್ಯ ವೃತ್ತಿಗಳ ಶಮನಾರ್ಥವಾಗಿ ಈ ಪ್ರಕಾರ ಸರ್ವಾತ್ಮಕ ಚಿಂತನೆಯನ್ನು ಮಾಡುತ್ತ ಅಲ್ಲಿ ಸಿದ್ಧರು ಕುಳಿತಿದ್ದರು. ಆ ಸಮಯದಲ್ಲಿ ಅಲ್ಲಿ ಮಹಾದೇವ ಶಾಸ್ತ್ರಿಯು ತನ್ನ ಐವತ್ತಾರು ಜನ ಶಿಷ್ಯವೃಂದ ತಕ್ಕೊಂಡು ಅವರ ಶಿಕ್ಷಣಾರ್ಥ ಬಂದನು. ಆಗ್ಗೆ ಮಹಾದೇವ ಶಾಸ್ತ್ರೀಯು ತನ್ನ ಶಿಷ್ಯರನ್ನು ಕುರಿತು ನ್ಯಾಯಶಾಸ್ತ್ರವನ್ನು ಉಪದೇಶಿಸುತ್ತಿದ್ದದ್ದೇನೆಂದರೆ -|ಸೂತ್ರ|| ದ್ರವ್ಯಗುಣಕರ್ಮ ಸಾಮಾನ್ಯ ವಿಶೇಷ ಸಮವಾಯಾಭಾವಾಃ |ಸಪ್ತ ಪದಾರ್ಥಾಃ|| ತತ್ರದ್ರವ್ಯಾಣಿ ಪ್ರಥಿವ್ಯಾಪ್ತೆಜೋ ವಾಯ್ವಾಕಾಶ ಕಾಲ ದಿಗಾತ್ಮ ಮನಾಂಸಿ ನವ್ಯೆವ|| ರೂಪಾದಿ ಚತುರ್ವಿಂಶತಿಗುಣಾಃ|| ಉತ್ ಕ್ಷೇಪಣಾದಿ ಪಂಚಕರ್ಮಾಣಿ|| ಸಾಮಾನ್ಯಂ ದ್ವಿವಿಧಂ ವಿಶೇಷಸ್ತ್ವನಂತಾ ವಿವ || ಸಮವಾಯಸ್ತ್ವೇಕ ವಿವ|| ಅಭಾವಶ್ಚತುರ್ವಿಧಃ|| ತತ್ರಗಂಧವತೀ ಪೃಥ್ವಿ ಸಾದ್ವಿವಿಧಾ ನಿತ್ಯಾನಿತ್ಯಾಚ|| ನಿತ್ಯಾ

ಪರಮಾಣುರೂಪಾ ಅನಿತ್ಯಾ ಕಾರ್ಯರೂಪಾ|| ಪುನಸ್ತ್ರಿವಿಧಾ|| ಶರೀರೇಂದ್ರಿಯ ವಿಷಯಭೇದಾತ್ || ಶರೀರ ಮಸ್ಮದಾದೀನಾಂ ಇಂದ್ರಿಯಂ ಗಂಧಗ್ರಾಹಕಂ ಘ್ರಾಣಂ ನಾಸಾಗ್ರವರ್ತಿ ವಿಷಯೋಮೃತ್ಪಾಷಾಣಾ ದಿಃ|| ಈ ಪ್ರಕಾರ ಮಹದೇವಶಾಸ್ತ್ರಿಯು ತನ್ನ ಶಿಷ್ಯರಿಗೆ ನ್ಯಾಯಶಾಸ್ತ್ರ ಬೋಧಿಸುತ್ತಿರುವಾಗ, ಜಗನ್ನಾಥ ಭಟ್ಟನೆಂಬುವನು ತನ್ನ ಎಪ್ಪತ್ತೆರಡು ಜನ ಶಿಷ್ಯರನ್ನು ಕೂಡಿಕೊಂಡು ಬಂದನು. ಈತನ ಗೌತಮೋಕ್ತ ನ್ಯಾಯವನ್ನು ತನ್ನ ಶಿಷ್ಯರಿಗೆ ಬೋಧಿಸುತ್ತಿರುವಾಗ - "ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ ಸಿದ್ಧಾಂತ, ಅವಯವ, ತರ್ಕ,ನಿರ್ಣಯ, ವಾದ, ಜಲ್ಪ, ವಿತಂಡ, ಹೇತ್ವಾಭಾಸ, ಛಲ, ಜಾತಿ, ನಿಗ್ರಹ, ಸ್ಥಾನಗಳೆಂಬ ಷೋಡಶ ಪದಾರ್ಥಗಳಿರುವವು' ಎಂದು ಹೇಳುತ್ತಿದ್ದರು. ಜಗನ್ನಾಥಬಟ್ಟನು ಹೀಗಂದಿದ್ದು ಕೇಳಿದ ಕೂಡಲೇ ಮಹಾದೇವ ಶಾಸ್ತ್ರಿಯು " ಸಪ್ತೈವ ಪದಾರ್ಥಃ "ಎಂದು ಕೂಗಿದನು. ಅದಕ್ಕೆ ಜಗನ್ನಾಥ ಭಟ್ಟನು, "ನನು ಷೋಡಶಪದಾರ್ಥಾಃ ತತ್ವಜ್ಞಾನಾನ್ನಿ ಶ್ರೇಯಸಾಧಿಗಮ ಇತಿ

ನ್ಯಾಯಶಾಸ್ತ್ರ ನಿರೂಪಿತೆ ತಸ್ಮಾತ್ ತಥಾ ಸಪ್ತೈವ ಇತಿ ದೃಷ್ಟಸತಿ" ಅನ್ನಲು, ಮಹಾದೇವ ಶಾಸ್ತ್ರಿಯು "ನೀನು ಹದಿನಾರು ಈ ಪದಾರ್ಥಗಳೆಂದೇನನ್ನುವಿಯೋ ಅವು ನಮ್ಮ ಏಳು ಪದಾರ್ಥಗಳಲ್ಲಿ ಅಂತರ್ಭಾವವಾಗರಿವವು" ಎಂದಂದನು. ಈ ಪ್ರಕಾರ ಅವರೊಳಗೆ ವಾದವಾಗುವಾಗ್ಗೆ ಅವಧೂತರು ಅಂದುಕೊಂಡದ್ದೇನಂದರೆ - ಇವರು ಅನಿತ್ಯ ವಸ್ತುಗಳ ವಿಚಾರವನ್ನು ಮಾಡುತ್ತಲಿದ್ದಾರೆ. ಇದರಲ್ಲೇ ಇವರು ಆಯುಷ್ಯವನ್ನೆಲ್ಲ ವೆಚ್ಚ ಮಾಡಿದರೆ, ಇವರಿಗೆ ನಿತ್ಯವನ್ನು ಎಂದೂ ಸಿಗಲಾರದು. ಹ್ಯಾಗೆ ಮಾಡಬೇಕು ? ಈಗ ಈ ಜನರ ವೃತ್ತಿಯನ್ನು ನಿತ್ಯವಸ್ತು ವಿಚಾರಕ್ಕೆ ಹಚ್ಚಬೇಕು. ಈ ಪ್ರಕಾರ ಚಿಂತಿಸಿ, ಸಿದ್ಧರು ಅವರನ್ನು ಕುರಿತು ಅಂದದ್ದು, "ಹೇ ಸುಮತಿಗಳಾದ ಪಂಡಿತರೇ, ನೀವು ದ್ರವ್ಯ ಗುಣಾದಿಗಳ ವಿಚಾರ ಮಾಡುವಾಗ್ಗೆ, ನೀವು ಅವುಗಳ ರೂಪವೇ ಆಗುತ್ತಿರೊ, ಅವುಗಳಿಗೆ ಭಿನ್ನವಾಗಿರುತ್ತೀರೋ? ನೀವು ತದ್ರೂಪವಾಗುತ್ತೀರೆಂಬುದು ಅನುಚಿತವು, ಯಾಕೆಂದರೆ ದ್ರವ್ಯ ಗುಣಾದಿಗಳು ಜಡಗಳಾಗಿದ್ದು ನೀವು ಚೇತನರಾಗುವಿರಿ.

ಆದ್ದರಿಂದ ನಿಮ್ಮ ಚೇತನ ವ್ಯಕ್ತಿ ಅವುಗಳಿಗೆ ಭಿನ್ನವಿರುವದು, ನೀವು ಜಡಕ್ಕೆ ಭಿನ್ನವಾಗಿ ಚೇತನವಾಗಿರುವಾಗ್ಗೆ, ಬ್ರಹ್ಮಚೈತನ್ಯಕ್ಕೆ ಅಭಿನ್ನರಾಗಿರುವಿರಿ. ಇಲ್ಲದಿದ್ದರೆ " ಏಕಮೇವ " ಎಂಬ ಶ್ರುತಿಗೆ ವಿರುದ್ಧವಾಗುವದು. ಈ ಅಭೇದವು ಜ್ಞಾನಕಾಲದಲ್ಲಿ ಮಾತ್ರ ಇರುವದು ಎಂದು ನೀವು ಹೇಳುವಿರಾದರೆ, ಬ್ರಹ್ಮದ ಸ್ವತಃ ಸಿದ್ಧತ್ವವು ಹೋದೀತು. ಆದ್ದರಿಂದ ಈ ಅಭೇದವು ನಿರಂತರವೆನಬೇಕು. ಇದನ್ನು ಕೇಳಿ ಪಂಡಿತರು,"ಕರ್ಮೋಪಾಸನೆಯ ಸಹಾಯದಿಂದ ಜ್ಞಾನವು ಮೋಕ್ಷ ಕೊಡುವುದು" ಎಂದು ನುಡಿದರು. ಅದಕ್ಕೆ ಸಿದ್ಧರು ಉತ್ತರ ಕೊಟ್ಟಿದ್ದೇನೆಂದರೆ- "ಜ್ಞಾನದೇವ ತು ಕೈವಲ್ಯಂ " ಎಂದು ಇರುವ ಶ್ರುತಿ ವಚನದಲ್ಲಿ "ಏವಂ' ಪದದಿಂದ ಜ್ಞಾನವು ಅಸಹಾಯವಾಗಿ ಮೋಕ್ಷಕ್ಕೆ ಕಾರಣವೆಂದಂತಾಯಿತು. ಮತ್ತು ಆ ವಾಕ್ಯದೊಳಗಿನ 'ತು' ಪದದಿಂದ ಜಡಸಾಧನಗಳೆಲ್ಲವು ವ್ಯಾವರ್ತನವಾದವು, ಸಿದ್ಧಾಂತ ಹೀಗದಲ್ಲ, ಜ್ಞಾನ ಒಂದರಿಂದಲೇ ಕೈವಲ್ಯವು ಪ್ರಾಪ್ತಿಯಾಗುವದು", ಸಿದ್ಧ ಸದ್ಗುರುಗಳ ಈ ವಚನವನ್ನು ಕೇಳಿ, "ಈತನು ಪೂರ್ಣ

ಬ್ರಹ್ಮನಿಷ್ಠನಿರುವನು. ಶ್ರೀ ವಿಶ್ವೇಶ್ವರನ ಕೃಪೆಯಿಂದ ಈತನಿಗೆ ಅನುಭವ ದೃಢವಾಗಿದೆ", ಎಂದು ಶಾಸ್ತ್ರಿಗಳು ಅಂದುಕೊಂಡು, ಇವರು ಕೂಡ ತಮ್ಮ ತರ್ಕ ನಡಿಯಲಾರದೆಂದು ತಿಳಿದು ಸಿದ್ಧರ ಮುಂದೆ ಕೈಜೋಡಿಸಿ ನಿಂತು, "ನಮ್ಮದು ಶಬ್ದಜ್ಞಾನ ಮಾತ್ರವು. ನಾವು ಅನುಭವ ಫಲವನ್ನು ಇನ್ನು ವರಗೆ ಸವಿಯಲಿಲ್ಲ", ಎಂದು ನಿರಭಿಮಾನದಿಂದ ನುಡಿಯಲು, ಅವರನ್ನು ಕುರಿತು ಸಿದ್ಧಾರೂಢರು, "ಇದು ತಾರಕೊಪದೇಶ ಸ್ಥಾನವು. ಆದ್ದರಿಂದ ಇಲ್ಲಿ ಎಲ್ಲಾ ಶಾಸ್ತ್ರಾರ್ಥವನ್ನು ತಾರಕೋಪದೇಶದಲ್ಲಿ ಸಮನ್ವಯಿಸಬೇಕು. ಭಿನ್ನಾನ್ವಯವನ್ನು ಪಂಡಿತ ಜನರು ಮಾಡಬಾರದು. ವೇದಗಳ ಕರ್ತನಾದ ಪರಶಿವನದು ಈ ಪ್ರಕಾರ ಅಭಿಪ್ರಾಯವಿರದು", ಎಂದನ್ನಲು ಆ ಶಾಸ್ತ್ರಿಗಳು ಸಿದ್ಧರಿಗೆ ನಮಸ್ಕರಿಸಿ ತಮ್ಮ ಶಿಷ್ಯರ ಕೂಡ ಹೊರಟುಹೋದರು. ಇಬ್ಬರೂ ಶಾಸ್ತ್ರಿಗಳು ಹೋದ ತರುವಾಯ, ಅವರೊಳಗಿನ ಮೂರು ಮಂದಿ ಶಿಷ್ಯರು ತಿರಿಗಿ ಬಂದು, ಸಿದ್ಧರನ್ನು ಕುರಿತು, "ನೀವು ಬ್ರಹ್ಮೋಪದೇಶ ಮಾಡುವಂತಾದ್ದು ನಮ್ಮ ಮನಸ್ಸಿಗೆ ಬರುವುದಿಲ್ಲ.

ಯಾಕೆಂದರೆ ಆ ಪ್ರತ್ಯಕ್ಷ ಅಶ್ರುತ ವಾಕ್ಯಗಳಿಂದ ಮನದ ಅಭಾವವಾಗುತ್ತದೆ, ಹೊರತು ಸದ್ಭಾವವು ಉಂಟಾಗಲಾರದು", ಎಂದು ಅಂದದ್ದು ಕೇಳಿ ಸದ್ಗುರುಗಳು ದಯಾವಂತರಾಗಿ ಅಂದದ್ದೇನೆಂದರೆ-

"ಲಯವಾಗುವದೆಂಬುದು ಯಾವುದು, ಜ್ಞಾನವೋ ಮನಸ್ಸೋ? ಜ್ಞಾನವಾದರೆ ಎಂದು ಲಯವಾಗುವದಿಲ್ಲ. ಯಾಕೆಂದರೆ ನೀವು ಅರಿತು, ಜ್ಞಾನದ ಲಯವಾಗಿದೆ ಅನ್ನುವಾಗ ಜ್ಞಾನದ ಸದ್ಭಾವ ಪ್ರತಿಪಾದನ ಮಾಡಿದಂತಾಗುವದು". ಇದನ್ನು ಕೇಳಿ ಆ ಶಿಷ್ಯರನ್ನುತ್ತಾರೆ, "ನೀವು ಹೇಳುವದು ಬಡವನು ತಾನು ರಾಜನೆಂದಂತೆ ಆಗುವದು", ಇದಕ್ಕೆ ಯತಿವರ್ಯರು ಅನ್ನುತ್ತಾರೆ- "ನಮ್ಮ ಅಂಬೋಣವು, ಪಿತ್ತರೋಗಗ್ರಸ್ತನಾದ ರಾಜನು ತಾನು ಸಹ ತಲವಾರನಂದಂತೆ ಆಗುವುದು. ಈ ಪ್ರಕಾರದ್ದು ನಿಮ್ಮ ಭ್ರಾಂತಿ ದಶೆಯು ಇರುವುದು." ಆಗ ಶಿಷ್ಯರು, "ನಿಮ್ಮದೊಂದು ದಶಾ, ನಮ್ಮದೊಂದು ದಶಾ," ಎಂದೆನ್ನಲು, ಸಿದ್ಧರು, """ಇಬ್ಬರ ದಶಾ ವಿಶೇಷಣವೂ ಇಲ್ಲದೆ, ಆ ಆತ್ಮನು ನಿರ್ವಿಶೇಷನಾಗಿರುವನು. ಹ್ಯಾಗೆ ಕತ್ತಲಿರಲಿ,

ಬೆಳಕಿನಲಿ, ಎರಡಕ್ಕೂ ಅಲಿಪ್ತವಾಗಿ ಆಕಾಶವಿರುವದೋ, ಹಾಗೆ ಆತ್ಮನು ನಿರ್ಮಲನಾಗಿರುವನು," ಎಂದು ನುಡಿದರು. ಅದಕ್ಕೆ ಆ ಶಿಷ್ಯಜನರು, "ಇದರ ಅನುಭವ ನಮಗೆ ಬರುವುದಿಲ್ಲವಲ್ಲ. ವಿದ್ಯಾಪಾಂಡಿತ್ಯದಿಂದ ಅನುಭವವು ಚಿತ್ತಕ್ಕೆ ಯಾಕೆ ಬರಲಾರದು ?" ಎಂದು ಕೇಳಲು, ಸಿದ್ಧರು, "ವಿದ್ಯಾಪಾಂಡಿತ್ಯ ಅಭಿಮಾನಕ್ಕೆ ಕಾರಣವಾಗುತ್ತದೆ. ಪಂಡಿತರು ವಿದ್ಯಾಮದದಿಂದ ಮುಂದಿನ ಜನ್ಮಕ್ಕೆ ಬ್ರಹ್ಮರಾಕ್ಷಸರಾಗಿ ಹುಟ್ಟಿವರು" ಎಂದು ಪ್ರತ್ಯುತ್ತರ ಕೊಟ್ಟರು. ಆಗ ಆ ಶಿಷ್ಯ ಜನರು ಅತ್ಯಂತ ಭಯಭೀತನಾಗಿ, "ಹಾಗಾದರೆ, ನಾವು ನ್ಯಾಯಾದಿ ಶಾಸ್ತ್ರಗಳ ಅಧ್ಯಯನವನ್ನು ಬಿಟ್ಟು ಬಿಟ್ಟು, ನಿಮ್ಮ ಪಾದಕ್ಕೆ ಶರಣು ಹೊಂದುವೆವು. ಶರಣು ಬಂದವರಿಗೆ ನಿಮ್ಮ ಆಶೀರ್ವಾದದಿಂದ ಶೀಘ್ರ ಬ್ರಹ್ಮಪ್ರಾಪ್ತಿಯಾಗಬೇಕು." ಅನ್ನಲು, "ಚಿತ್ತದಲ್ಲಿ ಶುದ್ಧಭಾವ ಇತ್ತೆಂದರೆ, ಈಶ ಕೃಪೆಯಿಂದ ಹಾಗೆಯೇ ಆಗಲಿ," ಎಂದು ಮಹಾತ್ಮರು ಆಶೀರ್ವಾದವನ್ನು ಪಾಲಿಸಿದರು.ಆ ಬಳಿಕ ಸಿದ್ಧರು ಅಹಲ್ಯಾಘಟ್ಟಕ್ಕೆ ಬಂದು, ಅಲ್ಲಿ ಕ್ಷಣಹೊತ್ತು ವಿಶ್ರಮಿಸಿಕೊಂಡು, ತರುವಾಯ ನಾರದ

ಘಟ್ಟವನ್ನು ನೋಡಿ, ಮುಂದೆ ಚೌಸತ್ತಿಘಟ್ಟ ನೋಡಿಕೊಂಡು, ಪಾಂಡೇಶ್ವರ ಘಟ್ಟವನ್ನೂ ಕಂಡರು. ಮಹಾಸ್ಮಶಾನ ಘಟ್ಟಕ್ಕೆ ಸಿದ್ಧರು ಹೋಗಿ, ಅಲ್ಲಿ ಶಿವಾಲಯದೊಳಗೆ ಮೂರ್ತಿಯನ್ನು ಕಂಡು, ಅನಂತರ ಯಕ್ಷರಾಜಘಟ್ಟವನ್ನು ನೋಡಿ, ಅಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ತಕ್ಕೊಂಡರು. ಬಳಿಕ ನಂಗಾಘಟಕ್ಕೆ ಹೋಗಿ ಕೂತಿರುವಾಗ, ಒಬ್ಬ ನಂಗಾ ಸನ್ಯಾಸಿಯು ಬಂದು ಸಿದ್ಧಾರೂಢರನ್ನು ಕಂಡು, 'ವಸ್ತ್ರಧಾರಣ ಮಾಡುವವರಿಗೆ ಚಿಂತೆ ಹೊರ್ತು ಸುಖವಿಲ್ಲ. ನೀವು ಸಾಧುಗಳಿರುತ್ತಾ ಯಾತಕ್ಕೆ ವ್ಯರ್ಥವಾಗಿ ವಸ್ತ್ರಧಾರಣ ಮಾಡುತ್ತೀರಿ ?' ಎಂದು ಕೇಳಲು, ಸಿದ್ಧರು, "ಪರಿಧಾನ ವರ್ಜಿತರಾದ ನಿಮಗೆ ಇಂದ್ರಿಯ ವಿಷಯ ಸಂಯೋಗದಿಂದ ದುಃಖವು ಪ್ರಾಪ್ತವಾಗುತ್ತದೋ ಇಲ್ಲವೋ?" ಎಂದು ಕೇಳಿದರು. ಇದನ್ನು ಕೇಳಿ ಆ ನಂಗಾ ಸನ್ಯಾಸಿಯು, "ಪ್ರಾರಬ್ಧ ಯೋಗದಿಂದ ವ್ಯವಹಾರ ಕಾಲದಲ್ಲಿ ಆದ ದುಃಖವನ್ನು ಸಹನೆಯಿಂದ ಪರಿಹರಿಸಿಕೊಳ್ಳುತ್ತೇವೆ," ಅಂದದಕ್ಕೆ ಅವಧೂತರು, "ಹಾಗಾದರೆ ಸಹನತೆಯು ಸಾಧನವಾಯಿತು. ಇದರ ಹೊರತು ವಸ್ತ್ರಗಳ

ವರ್ಜಾವರ್ಜನವು ಸುಖದ ಸಾಧನವಾಗಲಾರದು," ಎಂದು ನುಡಿಯಲು, ಆ ನಂಗಾನು "ಮೂದಿವಾನಾ, ದಿಲ್ ಶಿಯಾನಾ" ಹೀಗಂದು  ಹೊರಟು ಹೋದನು. ಅವಧೂತರಾದರು  ಅಲ್ಲಿಂದ ಹೊರಟು ವ್ಯಾಸಕಾಶಿಯಾದ ರಾಮನಗರಕ್ಕೆ ಬಂದು, ಕೆರೆದಂಡೆಯ ಮೇಲೆ ಕೂತರು. ಅಲ್ಲಿ ಕ್ಷಣಹೊತ್ತು ವಿಶ್ರಾಂತಿ ತಕ್ಕೊಂಡು, ಗಿರಿಜಾದೇವಿಯ ಮಂದಿರಕ್ಕೆ ಹೋಗಿ ಕೂತಿರುವಾಗ ದೇವಿ ಪೂಜಾರಿ ಅಲ್ಲಿಗೆ ಬಂದನು. ಆತನು ಸಿದ್ಧಾರೂಢರನ್ನು ನೋಡಿ, "ಈ ಅತಿಥಿಗೆ ಅನೇಕ ದಿವಸಗಳಿಂದ ಊಟವಾಗಲಿಲ್ಲೆಂಬಂತೆ ತೋರುತ್ತದೆ. ಇವನ ಹೊಟ್ಟೆಯು ಬೆನ್ನಿಗೆ ಹೋಗಿ ಹತ್ತಿದೆ ," ಎಂದಂದದ್ದು ಕೇಳಿ, ಸಿದ್ಧ ಮುನಿಗಳು ಚಿಂತಿಸುತ್ತಾರೆ, "ಪೂರ್ವದಲ್ಲಿ ವ್ಯಾಸಮುನಿಯು ಮೂರು ದಿನ ಕಾಶಿಯೊಳಗೆ ಉಪವಾಸ ಇದ್ದನು,

ಎಂದು ಕಾಶಿಯನ್ನು  ತುಚ್ಛ ಮಾಡಿದಾಗ, ವಿಶ್ವೇಶ್ವರನು ಆತನಿಗೆ ಕಾಶೀಬಾಹಿರನಾಗೆಂದು ಶಾಪಿಸಿದ್ದನು. ಹಾಗೆಯೇ ನನಗೀಗ ಆಯಿತು. ನನಗಾದರೂ ಈ ಮೂರು ದಿನ ಕಾಶಿಯೊಳಗೆ ಉಪವಾಸವಾಯಿತು, ಈಗ ಕಾಶಿಯ ಹೊರಗೆ

ಬಂದಾಗ ಪ್ರಾರಬ್ದ ಪರಿಚಾರಕನು  ಏನು ತಂದು ಪೂರೈಸುವನೋ  ನೋಡೋಣ." ಅಷ್ಟರಲ್ಲಿ ಆ ಪೂಜಾರಿಯು ಬಂದು,

"ಎಲೈ  ಅತಿಥಿಯೇ, ನೀನು ಯಾವನಿರುವಿ? " ಎಂದು ಕೇಳಲು, ಸಿದ್ಧರು, "ನಿನ್ನನ್ನು  ನೀನು ತಿಳಿದರೆ ಏನಾಗಿರುವಿಯೋ ಅದೇ ನಾನೂ ಆಗಿದ್ದೇನೆ," ಎಂದು ನುಡಿದರು. ಆಗ ಪೂಜಾರಿಯು, "ಹಾಗಾದರೆ ನೀನು ಊಟ ಮಾಡುವಿಯೋ?" ಎಂದು ಕೇಳಲು, ಸಿದ್ಧರು, "ನೀನು ಉಣ್ಣುತ್ತಿಯಾದರೆ  ನನಗೂ ಗ್ರಾಹ್ಯವದೆ," ಎಂದು ಅನ್ನಲು, ಪೂಜಾರಿಯು ತನ್ನ  ಮನೆಗೆ ಬರಲಿಕ್ಕೆ ಪ್ರಾರ್ಥಿಸಿದನು. ಆಗ ಸಿದ್ಧರು , "ಮನೆಗೆ ಕರಕೊಂಡು ಹೋಗಿ ಅತಿಥಿಗೆ  ಊಟ ಹಾಕುವುದಕ್ಕಿಂತ ಅವನಿದ್ದಲ್ಲಿಗೆ  ತಂದು ಕೊಟ್ಟರೆ ಮಹಾಪುಣ್ಯವು " ಎಂದು ಹೇಳಲು, ಪೂಜಾರಿಯು ಮನೆಗೆ ಹೋಗಿ ಷಡ್ರಸ ಅನ್ನ  ತಕ್ಕೊಂಡು ಬಂದನು. ಬಳಿಕ ಇಬ್ಬರೂ ಕೂತುಕೊಂಡು ಯಥೇಷ್ಟ  ಭೋಜನ ಮಾಡಿದರು. ಅದಲ್ಲದೆ ಇತರ ಅತಿಥಿಗಳಿಗೆ ಸಹಾ ಕೊಟ್ಟರು. ಅಲ್ಲಿಂದ ಸಿದ್ಧಯತಿಗಳು ಪಂಚಕ್ರೋಶ  ಯಾತ್ರಾ ಮಾಡಲಿಕ್ಕೆ

ಹೊರಟರು. ಪ್ರಥಮ ದಿವಸ ಜನಕರಾಜನು ಸ್ಥಾಪಿಸಿದ ಕರ್ದಮೇಶ ಸ್ನಾನವನ್ನು ನೋಡಿ, ಎರಡನೇ ಸ್ಥಾನವಾದ ಭೀಮಚಂಡಿ ದೇವಿಯ ದರ್ಶನ ತಕ್ಕೊಂಡರು. ಅಲ್ಲಿ ಗಂಧರ್ವ ಸೇನಲಿಂಗ, ಪಶ್ಚಿಮೇಶಾದಿ ಲಿಂಗಗಳನ್ನು ಕಂಡರು. ಮೂರನೇ ದಿನ ಅಯೋಧ್ಯಾಪತಿಯಾದ ರಾಮಷಡಾಯತವನ್ನು ನೋಡಿ, ನಾಲ್ಕನೇ ಕ್ಷೇತ್ರದಲ್ಲಿ ಪಾಂಡವರ ಮೂರ್ತಿಗಳನ್ನೂ ಕಾಣುತ್ತ ಮುಂದಕ್ಕೆ ನಡೆದರು. ಆ ಬಳಿಕ ಪಂಚಮ ಕ್ಷೇತ್ರಕ್ಕೆ ಬಂದು, ಕಪಿಲಾಧಾರಾತೀರ್ಥದಲ್ಲಿ ಸ್ನಾನಮಾಡಿ, ಸಿದ್ಧಕರಿ ಇತ್ಯಾದಿ ಲಿಂಗಗಳನ್ನು ನೋಡಿ, ಸ್ವರ್ಗ ಫಲದಾಯಿನಿಯನ್ನು ಕಂಡರು. ಸಿವರಾನಲಿಂಗ ದರ್ಶನ ಮಾಡಿಕೊಂಡು, ಮುಂದೆ

ನಿರ್ವಾಣಶ್ಯಾ, ಸರ್ವಸುಂದರಿ, ಬುದ್ಧಿ, ಸ್ವಧಾ,

ಸ್ವಾಹಾ,ಮಹಾನಿದ್ರಾ ಇತ್ಯಾದಿ ಶಕ್ತಿ ಗಣಗಳನ್ನು ಸಿದ್ಧರು ಕಾಣುತ್ತ ನಡೆದರು. ಈ ಪ್ರಕಾರ ಪಂಚಕ್ರೋಶ ಯಾತ್ರೆಯನ್ನು ಮುಗಿಸಿಕೊಂಡು, ಅವಧೂತರು ಒಂದು ಸ್ಥಾನದಲ್ಲಿ ಬಂದು ಸ್ವಸ್ಥ ಕೂತಿರಲು, ಒಬ್ಬ ಪುರುಷನು ಸತ್ತೂ ತೆಗೆದುಕೊಂಡು ಹೋಗುತ್ತಿದ್ದನು. ಅವನು ಮಹಾತ್ಮರನ್ನು ನೋಡಿ, ಒಂದು

ಬೊಗಸೆ ತುಂಬ ಹಿಟ್ಟನ್ನು ಸಿದ್ಧರ ಕೈಯೊಳಗೆ ಹಾಕಿದನು. ಆಗ ಯತಿವರ್ಯ ಅದನ್ನು ತಿನ್ನುವಷ್ಟರಲ್ಲಿ ದೈವಯೋಗದಿಂದ ಮತ್ತೊಬ್ಬನು ಮೊಸರು ತಕ್ಕೊಂಡು ಅಲ್ಲಿಗೆ ಬಂದನು.ಅವನೂ ಸಿದ್ಧರಿಗೆ ಮೊಸರು ಕೊಡಲು, ಉಪ್ಪು ಕೂಡಿಸಿದ ಆ ಮೊಸರು ಸತ್ತು ಹಿಟ್ಟನ್ನೂ ಕಲಿಸಿ, ಸಿದ್ಧರಾಜನು ಭಕ್ಷಿಸುವಂಥವರಾದರು.

ಆಮೇಲೆ ಸಿದ್ಧರು ಪ್ರಯಾಗ ಕ್ಷೇತ್ರಕ್ಕೆ ಹೋಗುವಾಗ, ಅವರು ಅಂದುಕೊಳ್ಳುತ್ತಾರೆ - "ಯಾವನಿಗೆ ಕ್ಷೇತ್ರ ಸಂಚಾರ ಮಾಡುವ ಶಕ್ತಿ ಸರ್ವಥಾ ಇರುವುದಿಲ್ಲವೋ, ಆತನು ಸರ್ವ ಕ್ಷೇತ್ರಗಳ ನಾಮಗಳನ್ನು ಪ್ರೇಮದಿಂದ ಉಚ್ಚರಿಸಬೇಕು. ಅವೆಲ್ಲಾ ಪರಮಾತ್ಮ ವಾಚಕವಿರುವುದರಿಂದ, ಆ ನಾಮಗಳು ಉಚ್ಚರಿಸುವವರು ಪರಮಾತ್ಮ ರೂಪರೆ ಆಗುವರು." ಆಮೇಲೆ ಸಿದ್ಧರು ಪ್ರಯಾಗ ಕ್ಷೇತ್ರಕ್ಕೆ ಹೋದಾಗ, ಅಲ್ಲಿ ಜನರು ಸ್ನಾನ ಮಾಡುತ್ತಿರುವರು, ಕೆಲವರು ರಾಮೇಶ್ವರದಿಂದ ಲಿಂಗಗಳನ್ನು ತಂದು ನದಿಯೊಳಗೆ ಮುಳುಗಿಸುವುರು, ಮತ್ತು ಕೆಲವರು ಕಾವಡಿ ತುಂಬಿಕೊಂಡು ಹೋಗುತ್ತಿರುವರು. ಇದೆಲ್ಲವನ್ನೂ ಸಿದ್ಧರು ನೋಡಿ, "ಈ ಎಲ್ಲಾ ಕರ್ಮಗಳಿಂದ ಈಶ್ವರನು

ಪ್ರೀತನಾಗುವನು. ಆತನ ಪ್ರಸಾದದಿಂದ ಪಕ್ವಕಾಷಾಯರಾಗಿ ಜ್ಞಾನಕ್ಕೆ ಅಧಿಕಾರಿಗಳಾಗುವರು. ಆ ಬಳಿಕ ಸಿದ್ಧರು ಕಿಲ್ಲೆಯೊಳಗೆ ಹೋಗಿ, ಸಂಗಮನಾಥನ ದರ್ಶನ ತಕ್ಕೊಂಡು, ಅಕ್ಷಯವಟದ ಮೂಲವನ್ನು ಕಂಡು, ಮೊಗಲಸರಾಯಿಗೆ ಹೋದರು. ಗ್ರಾಮವನ್ನು ಪ್ರವೇಶಿಸುತ್ತಿರುವಾಗ, ಮೇಘಗಳು ಆಕಾಶದಲ್ಲಿ ಒಟ್ಟುಗೂಡಿ, ಕೂಡಲೇ ಧಾರಾಕಾರ ಮಳೆ ಸುರಿಯಹತ್ತಿತ್ತು. ಆಗ ಮಹಾತ್ಮರು ಒಬ್ಬ ಸಾವುಕಾರನ ಮನಗೆ ಹೋಗಿ, ಕ್ಷಣ ಹೊತ್ತು ಕೂತಿರುವಾಗ್ಗೆ, ಪಾರೆಕರಿಯು ಬಂದು “ನೀನು ಇಲ್ಲಿ ಯಾಕ ಕೂತಿದ್ದಿ ?” ಎಂದು ಕೇಳಿದನು. ಅದಕ್ಕೆ ಮಹಾತ್ಮರು, “ಇದು ಮುಸಾಫಿರ ಖಾನೆಯೆಂದು ತಿಳಿದಿದ್ದೇನೆ," ಎಂದು ಉತ್ತರ ಕೊಟ್ಟಿದ್ದು ಕೇಳಿ, ಆ ಶಿಪಾಯಿಯು, “ಎಲೋ ನೀನು ಮೂಢನಿದ್ದಿ, ಇದರೊಳಗೆ ಸಾವಕಾರನು ವಾಸ ಮಾಡುತ್ತಾನೆ," ಎಂದು ನುಡಿದನು. ಇವರಿಬ್ಬರು ಭಾಷಣವನ್ನು ಕೇಳಿ, ಸಾವಕಾರನು ಮನೆಯೊಳಗಿಂದ ಹೊರಗೆ ಬಂದು, ಸಿದ್ಧರನ್ನು ಕುರಿತು, “ಸ್ವಾಮಿ, ಇದು ಮುಸಾಫಿರ್ ಖಾನೆಯೆಂದು ಯಾಕನ್ನುವಿರಿ ?”

ಎಂದು ಕೇಳಲು, ಅವಧೂತರು, “ನೀನು ಹುಟ್ಟುವ ಮೊದಲು ಆ ಮನೆಯೊಳಗೆ ಯಾರಿದ್ದರು ?” ಎಂದು ಕೇಳಲು "ನಮ್ಮ ತಂದೆ ಎಂದು ಉತ್ತರ ಕೊಡಲು, "ಅವನಿಗೂ  ಮುಂಚೆ ಯಾರಿದ್ದರು ?" ಎಂದು ಸಿದ್ದರು ಕೇಳಿದರು. “ನನ್ನ ಅಜ್ಜ" ಎಂದು ಸಾವುಕಾರನು ಉತ್ತರ ಕೊಡಲು, ಸಿದ್ಧಾವಧೂತರು, “ಈ ಮಂದಿರದಲ್ಲಿ ಒಬ್ಬ ರ ಹಿಂದೆ ಒಬ್ಬ ರಾಗಿ ಅನೇಕ ಮಂದಿ ವಾಸ ಮಾಡಿದರು. ಪ್ರತಿ ಒಬ್ಬ ನ ಜೀವಕಾಲವೆಂಬುದು ಒಂದೊಂದು ದಿನವೆಂದು ಭಾವಿಸಿದರೆ, ಪ್ರತಿ ಒಬ್ಬ ರು ಈ ಗೃಹದಲ್ಲಿ ಒಂದೊಂದು ದಿನವೆಂದು ಭಾವಿಸಿದರೆ, ಪ್ರತಿ ಒಬ್ಬ ರು ಈ ಗೃಹದಲ್ಲಿ ಒಂದೊಂದು ದಿನ ಇದ್ದು ಹೋದರು. ಅಂದ ಮೇಲೆ ಇದು ಮುಸಾಫಿರ್ ಖಾನೆಯಲ್ಲದೆ ಮತ್ತೇನು" ಎಂದು ನುಡಿದದ್ದನ್ನು  ಕೇಳಿ, ಸಾವಕಾರನು ಮನಸ್ಸಿನಲ್ಲಿ ಚಕಿತನಾಗಿ ತನ್ನಲ್ಲಿ ಅಂದುಕೊಳ್ಳುತ್ತಾನೆ, “ಈತನು ಸತ್ಯವಾಗಿ ಮಹಾತ್ಮನಿದ್ದಾನೆ. ಈತನಿಂದ ಈ ನಾನು ಕೃತಕೃತ್ಯನಾಗುವೆನು,” ಹೀಗೆ ಯೋಚಿಸಿ, ಸಾವುಕಾರನು ಬಹು ಅನುತಾಪಯುಕ್ತನಾಗಿ, ಸಿದ್ಧರ ಚರಣಕ್ಕೆ  ಬಿದ್ದನು.

ಆಮೇಲೆ ಅತ್ಯಂತ ನಮ್ರಭಾವದಿಂದ ಮಹಾತ್ಮರನ್ನು ಹಸ್ತಗ್ರಹಣ ಮಾಡಿ, ತನ್ನ ಮಂದಿರದೊಳಗೆ ಕರಕೊಂಡು ಹೋಗಿ, ಅಲ್ಲಿ ಒಂದು ಉತ್ತಮವಾದ ಪೀಠದ ಮೇಲೆ ಕೂಡ್ರಿಸಿದನು. ಷೋಡಶೋಪಚಾರದಿಂದ ಮಹಾತ್ಮರನ್ನು ಪೂಜಿಸಿ ಸರ್ವ ಕುಟುಂಬ ಸಮೇತವಾಗಿ ಅವರಿಗೆ ನಮಸ್ಕರಿಸಿದನು. ಆ ಸಾವುಕಾರನ ತಾಯಿಗೆ ಮೂರು ತಿಂಗಳುಗಳಿಂದ ಕುಕ್ಷಿಶೂಲ ವ್ಯಥೆ ಇರುತ್ತಿದ್ದು, ಸಾವಕಾರನು ಆಕೆಯ ವ್ಯಥೆಯನ್ನು ಪರಿಹರಿಸಬೇಕೆಂದು ಸದ್ಗುರುಗಳಿಗೆ ಪ್ರಾರ್ಥಿಸಲು, ಸದ್ಗುರುಗಳು ಅತಿ ಬೇನೆಯಿಂದ ನರಳುತ್ತಿರುವ ಆಕೆಯನ್ನು ನೋಡಿ, "ಇದು ಪೂರ್ವಜನ್ಮದ ಕಠಿಣವಾದ ಕರ್ಮದ ಫಲವಿರುವದು. ಶಿವಧ್ಯಾನ ಮಾನಸ ಪೂಜನಗಳಿಂದ ಆ ಕರ್ಮ ನಷ್ಟವಾಗುವದು. ಅಥವಾ ಮಹಾತ್ಮರ ಪಾದತೀರ್ಥ ಸೇವಿಸಿದ್ದಾದರೆ ಆ ಕರ್ಮಕ್ಕೆ ಪ್ರಾಯಶ್ಚಿತ್ತವಾಗುವದು ಮತ್ತು ಅದರಿಂದ ಈ ವ್ಯಾಧಿಯು ನಿಶ್ಚಯವಾಗಿ ಪರಿಹಾರವಾಗುತ್ತದೆ' ಎಂದು ನುಡಿದರು. ಇದನ್ನು ಕೇಳಿ ಸಾವಕಾರನು ಸಂತೋಷಪಟ್ಟು, "ಸ್ವಾಮಿ

ಅಂಥಾ ಮಹಾತ್ಮರಾದ ತಾವೇ ಪ್ರಾಪ್ತರಾಗಿದ್ದೀರಿ. ನಿಮ್ಮ ಪಾದ ತೀರ್ಥವನ್ನೇ ತಾಯಿಯ ಮುಖದಲ್ಲಿ ಹಾಕಿದ್ದಾರೆ, ಆಕೆಗೆ ಕ್ಷೇಮವಾದೀತು," ಹೀಗಂದು, ಅವಧೂತರ ಪಾದ ತೀರ್ಥವನ್ನು ಆ ವೃದ್ದೆಯ ಮುಖದಲ್ಲಿ ಹಾಕಿದನು. ಆ ಕೂಡಲೇ ಆಕೆಯ ವ್ಯಥೆ ಶಾಂತವಾಗಿ ಆಕೆಯು ಎದ್ದು ಕೂತಳು. ಸಿದ್ಧಾರೂಢರ ಸಮೀಪ ಹೋಗಿ, ಅವರನ್ನು ಕುರಿತು "ಸ್ವಾಮಿ ತಮ್ಮ ಪದಕಮಲಗಳ ಪ್ರಸಾದದಿಂದ ನಾನು ಕೃತಾರ್ಥಳಾದೆನು," ಎಂದು ನುಡಿದು ಮಹಾತ್ಮರ ಪಾದಗಳಿಗೆ ಎರಗಿದಳು. ಆಮೇಲೆ ಸಿದ್ಧಾರೂಢರಿಗೆ ಒಂದು ಆಸನ ಕೊಟ್ಟು, ಸಾವಕಾರನು ಮೃಷ್ಟಾನ್ನ ಭೋಜನವನ್ನು ನೀಡಿದನು, ಸಿದ್ಧರು ಮಿತಾನ್ನ ಸೇವನ ಮಾಡಿ ಕೈತೊಳಕೊಂಡು ಎದ್ದರು. ಸಾವಕಾರನು ರಾತ್ರಿಕಾಲದಲ್ಲಿ ಒಂದು ಮೃದುಶಯ್ಯ ರಚಿಸಿ ಅವಧೂತರನ್ನು ಅದರ ಮೇಲೆ ಮಲಗಿಸಿದನು. ಮಲಗಿದ್ದಾಗ ಸಿದ್ಧರು ಚಿಂತಿಸುತ್ತಾರೆ, "ಯಾವದೊಂದು ಉಪಾಧಿಯು ನನಗೆ ಬೇಡ, ಊಟಕ್ಕೆ ಬರೆ ಅನ್ನ, ಮಲಗಲಿಕ್ಕೆ ಕಲ್ಲು ಮುಳ್ಳಿನ ಭೂಮಿಯೇ ಹಾಸಿಗೆ, ಮತ್ತು ನನ್ನ ಪಾದದಿಂದ ಸಂಚರಣ ಇದೇ ನನಗೆ

ಪ್ರಿಯವಾಗುತ್ತದೆ. ಸುಖದುಃಖಗಳಲ್ಲಿ ಸಮಭಾವವು ಅದರಿಂದಲೇ ಹುಟ್ಟುತ್ತದೆ. ಆ ಭಾವದಿಂದ ದುಃಖವೆಲ್ಲಾ ಬಿಟ್ಟು ಹೋಗಿ, ಸುಖ ಆವಿರ್ಭಾವವಾಗುತ್ತದೆ" ಉಷಃಕಾಲದಲ್ಲಿ ಸಿದ್ಧರು ಎದ್ದು, ಯಾರೊಬ್ಬರಿಗೂ ಹೇಳದೆ ಹೋಗಿ, ಗಯಾ ಕ್ಷೇತ್ರದ ದಾರಿಯ ಒಂದು ಶಿವಾಲಯದಲ್ಲಿ ಹೋಗಿ ಕೂತುಕೊಂಡರು.

ಶ್ರೀ ಸಿದ್ಧನಾಥರ ವಿಚಿತ್ರ ಕಥೆಗಳನ್ನೇ ಕೇಳುವುದರಿಂದ ಕರ್ಣಗಳು ಪವಿತ್ರವಾಗುತ್ತವೆ. ಇದರ ಪುಣ್ಯಪ್ರಭಾವ ಎಷ್ಟೆಂದರೆ ಇದರ ಶ್ರವಣ ಮಾತ್ರದಿಂದ ಅಣುಮಾತ್ರವಾದರೂ ಪಾಪವು ಉಳಿಯಲಾರದು. ಇಂತೆಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳೆಲ್ಲ ಭಸ್ಮವಾಗುವಂಥಾ ಈ ಎಂಟನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸಿರುವನು.